ಸೇರಿದೆ. ಈ ಕಾರ್ಯಕ್ರಮದ ಪ್ರಕಾರ ಮಾರ್ಚ್ ೧೯೮೮ ಅಷ್ಟರೊಳಗೆ ಆಗಬೇಕು. ನಾನು ತಮಗೆ ಭರವಸೆಕೊಡುತ್ತೇನೆ ಏನೆಂದರೆ ಇಷ್ಟರಲ್ಲೇ ಈ ಸಬ್‌ಸ್ಟೇಷನ್ ಸ್ಥಾಪನೆ ಮಾಡಿ ಆಗತಕ್ಕಂಥ ವೊಲ್ಟೇಜ್ ತೊಂದರೆಯನ್ನು ನಿವಾರಿಸುತ್ತೇವೆ. ಸಬ್‌ಡಿವಿಜನ್ ಕಛೇರಿ ಬೆಂಕಿಂದು ಕೇಳಿದ್ದೀರಿ. ಆದು ಈ ವರ್ಷದ ನಮ್ಮ ಕಾರ್ಯಕ್ರಮದಲ್ಲಿ ಸೇರಿಲ್ಲ. ಮುಂದಿನ ವರ್ಷದಲ್ಲಿ ಪ್ರಯತ್ನ ಮಾಡಬಹುದು.

ಬ್ರಹ್ಮಾವರ ಕ್ಷೇತ್ರದಲ್ಲಿ ಪ್ರಾರಂಭವಾಗಿರುವ ಸರ್ಕಾರಿ ಪ್ರೌಢಶಾಲೆಗಳಿಗೆ ಕಳೆದ ೨ ವರ್ಷಗಳಿಂದ ರೂ. ೪೦,೦೦೦-೦೦ ಅನುದಾನ ಕೊಟ್ಟಿರುವುದು

ಶ್ರೀ ಬಸವರಾಜ್ (ಬ್ರಹ್ಮಾವರ).—ಮಾನ್ಯ ಅಧ್ಯಕ್ಷರೇ, ೧೯೮೪ರಲ್ಲಿ ಸರ್ಕಾರಿ ಆಜ್ಞೆ ನಂಬರ್ ಇಡಿ ೯೬ ಎಂ. ಎಚ್. ಎಸ್. ೮೪, ತಾ. ೨೫-೬-೮೪ರಂತೆ ನನ್ನ ಮತದಾರ ಕ್ಷೇತ್ರದಲ್ಲಿ ಪ್ರಾರಂಭವಾಗಿರುವ ಸರ್ಕಾರಿ ಪ್ರೌಢಶಾಲೆಗಳಿಗೆ ಕಳೆದ ೨ ವರ್ಷಗಳಿಂದ ರೂ. ೪೦,೦೦೦-೦೦ ಅನುದಾನ ಕೊಟ್ಟಿರುವುದಿಲ್ಲ. ವರ್ಷಕ್ಕೆ ೨೦ ಸಾವಿರ ರೂಪಾಯಿಗಳಂತೆ ಕೊಡುವ ಈ ಅನುದಾನಗಳಲ್ಲಿ ಪ್ರೌಢಶಾಲೆಗಳು ತಮಗೆ ಬೇಕಾದ ಫರ್ನಿಚರ್ ಮತ್ತು ಲ್ಯಾಬೊರೇಟರಿ ಸಾಮಗ್ರಿಗಳನ್ನು ಜೋಡಿಸಿ ಕೊಳ್ಳುತ್ತಾರೆ. ಆದರೆ ೧೯೮೫-೮೬ ಮತ್ತು ೧೯೮೬-೮೭ರ ಸಾಲಿನ ಒಟ್ಟು ೪೦,೦೦೦ ರೂ. ಗಳು ದೊರೆಯದೆ ಲ್ಯಾಬೊರೇಟರಿ ಸಾಮಗ್ರಿಗಳಿಲ್ಲದೇ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತುಂಬಾ ಅನಾನುಕೂಲ ಆಗಿರುವುದರಿಂದ ಈ ಹಣವನ್ನು ಬಿಡುಗಡೆ ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ತಮ್ಮ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ (ಮೀನುಗಾರಿಕೆ ಮತ್ತು ಬಂದರುಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ವಿದ್ಯಾಮಂತ್ರಿಗಳು ಕೌನ್ಸಿಲ್‌ನಲ್ಲಿದ್ದಾರೆ. ಈ ವಿಷಯವನ್ನು ಅವರ ಗಮನಕ್ಕೆ ತರುತ್ತೇನೆ.

ಮಾಲೂರು ತಾಲ್ಲೂಕಿನಲ್ಲಿ ರೈತಾಪಿಜನ ಕೊಳವೆ ಬಾವಿಗಳನ್ನು ಹಾಕಿಕೊಂಡು ಬರಗಾಲದಲ್ಲಿ ತಮ್ಮ ಜೀವನ ನಡೆಸಲು ಅನುಕೂಲ ಕಲ್ಪಿಸುವುದು

ಶ್ರೀ ಹೆಚ್. ಬಿ. ದ್ಯಾವರಪ್ಪ (ಮಾಲೂರು).—ಮಾನ್ಯ ಅಧ್ಯಕ್ಷರೇ, ಮಾಲೂರು ತಾಲ್ಲೂಕಿನಲ್ಲಿ ರೈತಾಪಿ ಜನ ಕೊಳವೆ ಬಾವಿಗಳನ್ನು ಹಾಕಿಕೊಂಡು ಈ ಬರಗಾಲದಲ್ಲಿ ತಮ್ಮ ಜೀವನ ನಡೆಸುತ್ತಿರುವುದು ಎಲ್ಲರಿಗೂ ತಿಳಿದವಿಷಯವಾಗಿದೆ. ಈ ಕೊಲಾರ ಜಿಲ್ಲೆಯಲ್ಲಿ ಯಾವ ನೀರಾವರಿ ಆಶ್ರಯವೂ ಇಲ್ಲದೆ, ಕೆರೆ ಕುಂಟೆಗಳು ಹೂಳಿನಿಂದ ಮುಚ್ಚಿ ಹೋಗಿ ಬಾವಿಗಳು ನೀರಿಲ್ಲದೆ ಬತ್ತಿ ಹೋಗಿ ಕೊಳವೆ ಬಾವಿಗಳು ಜೀವನಾಡಿಯಾಗಿ ಉಳಿದಿರುತ್ತವೆ. ರೈತಾಪಿ ಜನ ಸ್ವಂತ ಖರ್ಚಿನಿಂದ ಕೊಳವೆ ಬಾವಿಗಳನ್ನು ಹಾಕಿಕೊಂಡಿರುವುದಲ್ಲದೆ, ಬಡವರು, ದೀನದಲಿತರು ಸರ್ಕಾರದಿಂದ ಒದಗುವ ಸಾಲ ಸೌಲಭ್ಯಗಳು, ಬ್ಯಾಂಕುಗಳಿಂದ ಹಾಗೂ ನೂರು ಬಾವಿ ಯೋಜನೆಯ ಅಡಿಯಲ್ಲಿ ದೊರೆಯುವ ಸೌಲಭ್ಯಗಳನ್ನು ಉಪಯೋಗಿಸಿಕೊಂಡು, ಕೊಳವೆಬಾವಿಗಳನ್ನು ಕೊರೆದು ತಮ್ಮ ಜೀವನವನ್ನು ಸಾಗಿಸುತ್ತಾ ಇರುವುದು ಸರ್ಕಾರಕ್ಕೆ ಗೊತ್ತಿರುವ ವಿಷಯ. ಇದುವರೆಗೂ ಮಾಲೂರು ತಾಲ್ಲೂಕನ್ನು ಭೂಗರ್ಭ ಇಲಾಖೆಯವರು ''ಬಳಪು'' ಎಂದು ಪರಿಗಣಿಸಿದ್ದ ಪ್ರಯುಕ್ತ, ಕೊಳವೆ ಬಾವಿಗಳನ್ನು ಕೊರೆಯಲು ಅವಕಾಶವಿದ್ದುದು ಸರಿಯಷ್ಟೆ. ಆದರೆ ಈ ವರ್ಷ ಮಾಲೂರು ತಾಲ್ಲೂಕನ್ನು ''ಗ್ರೇ'' ಎಂದು ಪರಿಗಣಿಸಿ, ತಾಲ್ಲೂಕಿಗೆ ಬೂದು ಬಣ್ಣ ಹಚ್ಚಿ ಬಡಬಗ್ಗರಿಗೆ ಆಗಬೇಕಾದ ಕೊಳವೆ ಬಾವಿ ಕೊರೆಯುವ ಸವಲತ್ತುಗಳಿಗೆ ಅಡ್ಡಿಯಾಗಿ ಬಹಳ ತೊಂದರೆಯಾಗಿದೆ. ಈ ಬಗ್ಗೆ ಜನಗಳಿಂದ ಬಹಳ ಒತ್ತಡವಿದೆ. ಕೊರೆದ ಕೊಳವೆ ಬಾವಿಗಳಲ್ಲಿ ನೂರಕ್ಕೆ ಎಂಭತ್ತು ಬಾವಿಗಳಲ್ಲಿ ಒಳ್ಳೆಯ ನೀರು ದೊರೆತು ಅನುಕೂಲ ಪರಿಸ್ಥಿತಿಯಲ್ಲಿರುವ ತಾಲ್ಲೂಕನ್ನು ''ಗ್ರೇ'' ಎಂದು ಪರಿಗಣಿಸಿರುವುದು ಸಾಧುವಲ್ಲವಾಗಿದೆ. ಆದ್ದರಿಂದ ಸರ್ಕಾರದವರು ಕೂಡಲೇ ಜರೂರು ಗಮನ ಹರಿಸಿ, ''ಗ್ರೇ'' ಎಂಬುದನ್ನು ''ಬಳಪು'' ಎಂದು ಪರಿಗಣಿಸಿ, ಕೊಳವೆ ಬಾವಿಗಳನ್ನು ತೋಡಿಸಲು ಅವಕಾಶ ಮಾಡಿಕೊಟ್ಟು ಬರಗಾಲದಲ್ಲಿ ಬಡ ರೈತರು ತಮ್ಮ ಜೀವನವನ್ನು ಸುಗಮವಾಗಿ ಸಾಗಿಸಲು ಅವಕಾಶ ಮಾಡಿಕೊಡಬೇಕಾಗಿ ಕೋರುತ್ತೇನೆ.

ಅಧ್ಯಕ್ಷರು.—ಮಲ್ಟಿ ಪರ್‌ಪಸ್ ಮಂತ್ರಿಗಳಾದ ರಘುಪತಿಯವರೇ, ತಾವೇ ಹೇಳಿ.

ಶ್ರೀ ಎಂ. ರಘುಪತಿ (ಮೀನುಗಾರಿಕೆ ಮತ್ತು ಬಂದರು ಸಚಿವರು).—ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಮಂತ್ರಿಗಳು ಆ ಸದನದಲ್ಲಿದ್ದಾರೆ. ಅವರ ಪರವಾಗಿ ಈ ಕೆಳಕಂಡ ಲಿಖಿತ ಉತ್ತರವನ್ನು ಹೇಳುತ್ತೇನೆ.

ಕೇಂದ್ರ ಸರ್ಕಾರದವರು ರಚಿಸಿರುವ ಅಂತರ್ಜಲ ಪುನರ್‌ಮಾಲೀಕರಣ ಸಮಿತಿಯವರು ರೂಪಿಸಿರುವ ಹಲವು ನಿಬಂಧನೆಗಳಿಗನುಸಾರವಾಗಿ ತಾಲ್ಲೂಕುಗಳನ್ನು ಕಪ್ಪು ಮತ್ತು ಭೂದು ಎಂದು ರಾಜ್ಯದಲ್ಲಿ ವರ್ಗೀಕರಿಸಲಾಗಿದೆ. ವಾರ್ಷಿಕ ಅಂತರ್ಜಲ ಲಭ್ಯತೆಯಲ್ಲಿ ಶೇಕಡ ೬೫ಕ್ಕಿಂತ ಹೆಚ್ಚು ಅಂತರ್ಜಲ ಬಳಕೆ ಇದ್ದಲ್ಲಿ ಭೂದು ಪ್ರದೇಶವೆಂದೂ ಹಾಗೂ ಶೇಖಡ ೮೫ಕ್ಕಿಂತ ಹೆಚ್ಚು ಬಳಕೆ ಇದ್ದಲ್ಲಿ ಕಪ್ಪು ಪ್ರದೇಶವೆಂದು ಘೋಷಿಸಲಾಗುವುದು. ಶೇಕಡ ೬೫ಕ್ಕಿಂತ ಕಡಿಮೆ ಪ್ರಮಾಣದಲ್ಲಿ ಅಂತರ್ಜಲದ ಬಳಕೆ ಕಂಡುಬಂದಲ್ಲಿ ಬಿಳಿ ಪ್ರದೇಶವೆಂದು ಪರಿಗಣಿಸಿ ಅಂತಹ ತಾಲ್ಲೂಕುಗಳಲ್ಲಿ ಮಾತ್ರ ಅಂತರ್ಜಲಾಧಾರಿತ ಸಣ್ಣ ನೀರಾವರಿ ಕಾರ್ಯಕ್ರಮಗಳಿಗೆ ನಬಾರ್ಡ್ ಸಂಸ್ಥೆಯು ಹಣಕಾಸಿನ ಸೌಲಭ್ಯತೆ ಕಲ್ಪಿಸಿಕೊಡುತ್ತದೆ. ಆದ್ದರಿಂದ ಕಪ್ಪು ಮತ್ತು ಭೂದು ಪ್ರದೇಶವೆಂದು ವರ್ಗೀಕರಿಸುವುದು ಇಲಾಖೆಯ ಏಕಮುಖ ಘೋಷಣೆಯಲ್ಲಿ ಈ ವರ್ಗೀಕರಣ ಯಾವುದೇ ತಾಲ್ಲೂಕಿನಲ್ಲಿ ಲಭಿಸುವ ಅಂತರ್ಜಲ ಹಾಗೂ ಅದರ ಬಳಕೆಯ ಪ್ರಮಾಣವನ್ನು ಅವಲಂಬಿಸಿದೆಯೇ ಹೊರತು ಪತ್ರದಲ್ಲಿ ಸೂಚಿಸಿರುವಂತೆ ಯಾವುದೇ ತಾಲ್ಲೂಕಿನಲ್ಲಿ ಕೊಳವೆ ಬಾವಿಗಳನ್ನು ತೋಡಿಸಿದಲ್ಲಿ ನೀರು ಬರುವುದಿಲ್ಲ ಎಂಬ ದೃಷ್ಟಿಯಿಂದಲ್ಲ.

ಅಂತರ್ಜಲ ಪುನರ್ ಮಾಲೀಕರಣ ಸಮಿತಿಯವರು ಸೂಚಿಸಿರುವ ನಿಯಮಗಳಿಗನುಸಾರ ಮಾಲ್ಲೂರು ತಾಲ್ಲೂಕಿನಲ್ಲಿ ೧೯೨೨ರ ವೇಳೆಗೆ ಬಳಕೆಯ ಮಟ್ಟವನ್ನಾಧರಿಸಿ ಸದರಿ ತಾಲ್ಲೂಕನ್ನು ಬೂದು ಪ್ರದೇಶವೆಂದು ನಬಾರ್ಡ್ ಸಂಸ್ಥೆಯವರು ಪರಿಗಣಿಸಿದ್ದಾರೆ.

ದಿನಾಂಕ ೨೯-೮-೮೭ರಂದು ಕರ್ನಾಟಕ ಸರ್ಕಾರದ ಅಭಿವೃದ್ಧಿ ಆಯುಕ್ತರ ನೇತೃತ್ವದಲ್ಲಿ ಈ ವರ್ಗೀಕರಣಗಳ ಬಗ್ಗೆ ಚರ್ಚಿಸಲು ನಡೆಸಿದ ಸಭೆಯಲ್ಲಿ ಮಾಲೂರು ತಾಲ್ಲೂಕಿನಲ್ಲಿ ಸೀಮಿತ ಅಂತರ್ಜಲಾಧಾರಿತ ಸಣ್ಣ ನೀರಾವರಿ ಕಾರ್ಯ ಕ್ರಮ ಕೈಗೊಳ್ಳಲು ಅನುವು ಮಾಡುವ ವ್ಯವಸ್ಥೆ ಬಗ್ಗೆ ಪರಿಗಣಿಸಲು ನಬಾರ್ಡ್ ಸಂಸ್ಥೆಯು ಒಪ್ಪಿರುತ್ತದೆ. ಸಭೆಯ ತೀರ್ಮಾನದಂತೆ ಸದರಿ ತಾಲ್ಲೂಕಿನಲ್ಲಿ ಕಿರು ಜಲಾನಯನ ಪ್ರದೇಶದ ಅಧ್ಯಯನವನ್ನು ಆಧ್ಯತೆ ಮೇಲೆ ಕೈಗೊಳ್ಳಲು ವ್ಯವಸ್ಥೆ ಮಾಡಲಾಗುತ್ತಿದೆ. ಈ ಅಧ್ಯಯನವನ್ನು ಪೂರ್ಣಗೊಳಿಸಿ ವರದಿ ಸಲ್ಲಿಸುವವರೆಗೆ ವರ್ಗೀಕರಣದ ಬದಲಾವಣೆ ಮಾಡಲು ಬರುವುದಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇಷ್ಟರವರೆಗೂ ಮಾನ್ಯ ಗೃಹ ಸಚಿವರು ಇಲ್ಲಿಯೇ ಇದ್ದರು. ಈಗತಾನೆ ಹೊರಟು ಹೋಗಿದ್ದಾರೆ. ಈಗ ಎಲ್ಲದಕ್ಕೂ ಒಂದೇ ಮಂತ್ರ. ನಾನು ಈ ವಿಷಯವನ್ನು ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸುತ್ತೇನೆ ಎಂದು ಉತ್ತರ ಕೊಡುತ್ತಿದ್ದಾರೆ. ನಾನು ನನ್ನ ಪ್ರಶ್ನೆಯನ್ನು ಕೇಳುವ ಬದಲು ಸುಮ್ಮನೆ ಇರುವುದೇ ವಾಸಿ ಎಂದು ಅನಿಸುತ್ತದೆ. ಮಾನ್ಯ ರಘುಪತಿಯವರು ಶಿಕ್ಷಣ ಮಂತ್ರಿಗಳಾಗಿದ್ದಾಗ ಒಂದು ಆಶ್ವಾಸನೆ ಕೊಟ್ಟರು, ಅದು ಇನ್ನೂ ಆಗಿಲ್ಲ. ಆದ್ದರಿಂದ ಈಗ ಇವರು, ಇನ್ನೊಬ್ಬರು ಮಂತ್ರಿಗಳಿಗೆ ಹೇಳಿದರೆ, ಆ ಕೆಲಸ ಆಗುವುದು ಅಷ್ಟರಲ್ಲೇ ಇದೆ.

ಅಧ್ಯಕ್ಷರು.—ಅಶ್ಯೂರೆನ್ಸ್ ಕಮಿಟಿ ಚೇರ್ಮನ್‌ರವರು ಇಲ್ಲಿಯೇ ಇದ್ದಾರೆ. ಮಾನ್ಯ ಕೊಟ್ರಪ್ಪ ನವರೇ, ಇವರ ಅಶ್ಯೂರೆನ್ಸ್ ಏನಾಯಿತು ?

ಶ್ರೀ ಬಿ.ಜಿ. ಕೊಟ್ರಪ್ಪ.—ನಮ್ಮ ಕಮಿಟಿ ಮುಂದೆ ಅವರ ಭರವಸೆ ಬಂದಾಗ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

ಅಧ್ಯಕ್ಷರು.—ಶ್ರೀಮತಿ ನಾಗರತ್ನಮ್ಮನವರೇ, ಹಾಗಾದರೆ ನಿಮ್ಮ ಖಿಳಿರ ಪ್ರಶ್ನೆಯನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಎಂ.ಎಸ್. ಕೃಷ್ಣನ್.—ಈಗ ವಿಧೇಯಕಗಳನ್ನು ಬೇಕಾದರೆ ಇಂಟ್ರಡ್ಯೂಸ್ ಮಾಡಲಿ. ಅದಕ್ಕೆ ನಾವು ವಿರುದ್ಧವಾಗಿಲ್ಲ. ಆದರೆ ವಿಧೇಯಕಗಳ ಪರ್ಯಾಲೋಚನೆ ಮತ್ತು ಆಂಗೀಕಾರ ಎಂದು ಏನು ಕೆಲವು ಬಿಲ್‌ಗಳು ಇವೆ. ಅವನ್ನು ಇವತ್ತು ತಡೆಹಿಡಿಯುವುದು ಒಳ್ಳೆಯದು. ಏಕೆಂದರೆ ಮುಖ್ಯವಾದ ಎರಡು ವಿಚಾರಗಳು ಇವೆ. ನಿನ್ನೆ ದಿವಸ ಸಹ ಅವು ಚರ್ಚೆಗೆ ಬರಲಿಲ್ಲ, ಮೊನ್ನೆ ಸಹ ಚರ್ಚೆಯಾಗಲಿಲ್ಲ. ನಾನು ತಮ್ಮನ್ನು ಕೇಳಿಕೊಳ್ಳುವುದು ಇಷ್ಟೆ. ಮೊದಲು ಇದರ ಬಗ್ಗೆ ಒಂದೆರಡು ಘಂಟೆಗಳ ಕಾಲ ಚರ್ಚೆಯಾಗಲಿ. ತಮಗೆ ಅಧಿಕಾರ ಇದೆ, ಇದನ್ನೇ ಮೊದಲು ಚರ್ಚೆಗೆ ತೆಗೆದುಕೊಳ್ಳಬಹುದು.

ಶ್ರೀ ಎಂ. ರಘುಪತಿ.—ಈಗಲೇ ಬೇಕಾದರೆ ನಿಮ್ಮದನ್ನು ತೆಗೆದುಕೊಳ್ಳೋಣ. ಮೊದಲು ಬಿಲ್‌ಗಳನ್ನು ಇಂಟ್ರಡ್ಯೂಸ್ ಮಾಡಲಿ.